ಇದೆ ಇದು ಎಂದು ಮನಗಂಡು ಒಂದೊಂದು ಪಾಲಿಕ್ಲಿನಿಕ್‌ಗಳನ್ನು ಮಾಡಬೇಕು. ಎನ್ನುವಂತಹ ಒಂದು ಯೋಜನೆಯನ್ನು ಸಿದ್ದಮಾಡಿದ್ದೇವೆ. ಒಂದು ಪಾಲಿಕ್ಲಿನಿಕ್‌ಗೆ ಸುಮಾರು 25 ಲಕ್ಷ ರೂಪಾಯಿ ಬೇಕಾಗುತ್ತದೆ. ಆ ದೃಷ್ಟಿಯಿಂದ 5 ವರ್ಷಗಳಲ್ಲಿ ಪ್ರತಿ ಅಸೆಂಬ್ಲಿ ಕ್ಷೇತ್ರಕ್ಕೂ ಒಂದು ಪಾಲಿಕ್ಲಿನಿಕ್ ಎಂದರೆ ವಿವಿಧೋದ್ದೇಶವುಳ್ಳಂತರ ದೊಡ್ಡ ಆಸ್ಪತ್ರೆ ರೀತಿಯಲ್ಲೇ ಈ ಪಶುಗಳ ಆಸ್ಪತ್ರೆಯನ್ನು ಮಾಡಲಾಗುತ್ತದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ನನ್ನ ತಾಲ್ಲೂಕಿಗೆ ಈ ಸಾರಿ 93-94ರಲ್ಲಿ ನನಗೆ ಒಂದು ಕೊಡರಿ ಎಂದು ತಮಗೆ ಹೇಳಿದ್ದಕ್ಕೆ ಉತ್ತರ ಹೇಳಲಿಲ್ಲ.

ಶ್ರೀ ಕೆ.ಎನ್. ನಾಗೇಗೌಡ : ಅವರು ಹೇಳಿದ ರೀತಿಯಲ್ಲಿ ಅಲ್ಲಿ ಅವಶ್ಯಕತೆ ಇದೆ. ಅದನ್ನು 94-95ರ ಏಪ್ರಿಲ್‌ನಿಂದ ಪ್ರಾರಂಭ ಮಾಡುತ್ತೇವೆ. ಆಗ ಖಂಡಿತವಾಗಿಯೂ ಸಹ ಅವರ ಬೇಡಿಕೆಯನ್ನು ಪರಿಶೀಲಿಸಲಾಗುವುದು.

ಸರ್ಕಾರಿ ಔಷಧ ಮಳಿಗೆಯಲ್ಲಿ ದರಗುತ್ತಿಗೆ ನಿಯಮಗಳ ಉಲಂಘನೆ

391 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಆರೋಗ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಔಷಧ ಮಳಿಗೆಯ ಮುಖ್ಯ ಮೇಲ್ವಿಚಾರಕರು ಎಲ್ಲಾ ಔಷಧಿ ಮತ್ತು ಇತರೆ ವಸ್ತುಗಳನ್ನು ಪರಿಶೀಲಿಸಿ ದರಗುತ್ತಿಗೆ ನಿಯಮಗಳಿಗನುಸಾರವಾಗಿ ಸ್ವೀಕರಿಸುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ದರಗುತ್ತಿಗೆ ನಿಯಮಗಳಿಗನುಸಾರವಾಗಿ ಸ್ವೀಕರಿಸಿಲ್ಲದಿದ್ದಲ್ಲಿ ಕಾರಣವೇನು? ಹಾಗೂ ಅದಕ್ಕೆ ಜವಾಬ್ದಾರರು ಯಾರು?

ಇ) ಅದರಿಂದ ಸರ್ಕಾರಕ್ಕೆ ಆಗಿರುವ ಆರ್ಥಿಕ ನಷ್ಟವೆಷ್ಟು? ಈ ನಷ್ಟವಾಗಿರುವ ಹಣವನ್ನು ಅವರಿಂದ ವಸೂಲಿ ಮಾಡಲಾಗುವುದೇ? ಹಾಗೂ ಅವರ ಮೇಲೆ ಯಾವ ರೀತಿ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಸರ್ಕಾರಿ ಔಷಧಿ ಮಳಿಗೆಯ ಮುಖ್ಯ ಮೇಲ್ವಿಚಾರಕರು ಔಷಧಿ ಮತ್ತಿತರ ಎಲ್ಲಾ ವಸ್ತುಗಳನ್ನು ದರಗುತ್ತಿಗೆಯ ನಿಯಮಗಳಿಗನುಗುಣವಾಗಿಯೇ ಸ್ವೀಕರಿಸುತ್ತಿದ್ದಾರೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಎಂ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯನ್ನು ಕೇಳುವುದಕ್ಕೆ ಮೊದಲು ನಾನು ತಮ್ಮನ್ನು ಒಂದು ಕ್ಲಾರಿಫಿಕೇಷನ್ ಕೇಳಿ ಅನಂತರ ಪ್ರಶ್ನೆಯನ್ನು ಕೇಳುತ್ತೇನೆ. ತಾವೂ ಕೂಡ ಸಂಪ್ರದಾಯವಾದಿಗಳು ಎಂದು ನನ್ನ ನಂಬಿಕೆ. ಒಂದು ಸಾರಿ ಮಾತನಾಡತಕ್ಕ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಯೀಲ್ಡ್ ಆದರೆ, ನಮಗೆ ಮಾತನಾಡತಕ್ಕ ಅವಕಾಶ ಇದೆಯೋ ಇಲ್ಲವೋ ತಾವೇ ಹೇಳಿ.

ಅಧ್ಯಕ್ಷರು : ತಾವು ಮೊದಲು ಪ್ರಶ್ನೆ ಕೇಳಿ. ಅನಂತರ ತಾವು ನನ್ನ ಚೇಂಬರ್‌ಗೆ ಬಂದು ಮಾತಾನಾಡಿ.

ಶ್ರೀ ಎಂ. ನಾರಾಯಣಸ್ವಾಮಿ : ಅಧ್ಯಕ್ಷರೇ, ಅದು ಆಗುವುದಿಲ್ಲ. ನಾನು ಪ್ರತಿಭಟನೆ ಮಾಡುತ್ತೇನೆ.

(ಗೊಂದಲ)

ಮಂತ್ರಿಗಳು ಯೀಲ್ಡ್ ಆದರು. ಮಂತ್ರಿಗಳಿಗೆ ಪ್ರಚೋದನೆ ಮಾಡಿ ನೀವು ಮಾತನಾಡಿರಿ ಎಂದು ಅವರಿಗೆ ಹೇಳಿದಿರಿ ಅವರು ಯೀಲ್ ಆದರೂ ನನಗೆ

ಅವಕಾಶ ಮಾಡಿ ಕೊಡಲಿಲ್ಲ, ಆದ್ದರಿಂದ, ನಾನು ಪ್ರಶ್ನೆ ಕೇಳುವುದಿಲ್ಲ, ನಾನು ಪ್ರತಿಭಟಿಸುತ್ತೇನೆ.

ಅಧ್ಯಕ್ಷರು : ಆಯಿತು, ಆಯಿತು.....

ಶ್ರೀ ಎಂ. ನಾರಾಯಣಸ್ವಾಮಿ : ಅಧ್ಯಕ್ಷರೇ, ತಾವು ಮಾಡತಕ್ಕದ್ದು ಸರಿಯಿಲ್ಲ

ಅಧ್ಯಕ್ಷರು : ಆ ರೀತಿ ತಾವು ಮಾತನಾಡುವುದು ಸರಿಯಲ್ಲ, ಈ ರೀತಿ ಮಾತನಾಡಿದರೆ ನಾನು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಸದಸ್ಯರು, ಸಭಾಧ್ಯಕ್ಷರ ವಿಚಾರದಲ್ಲಿ ಹಗುರವಾಗಿ ಮಾತನಾಡಬಾರದು.

ಬೀದರ್ ಜಿಲ್ಲಾ ಆಸ್ಪತ್ರೆಯಲ್ಲಿರುವ ವೈದ್ಯರುಗಳ ಹುದ್ದೆಗಳ ಭರ್ತಿ

378 - ಶ್ರೀ ನಾರಾಯಣ ರಾವ್ ಮನವಳ್ಳಿ (ಬೀದರ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೀದರ್ ಜಿಲ್ಲಾ ಆಸ್ಪತ್ರೆಯಲ್ಲಿರುವ ವೈದ್ಯರುಗಳ ಸಂಖ್ಯೆ ಹಾಗೂ ಇತರೆ ಸಿಬ್ಬಂದಿ ವರ್ಗದ ಸಂಖ್ಯೆ ಎಷ್ಟು ?

ಆ) ಆ ಆಸ್ಪತ್ರೆಗೆ ಮಂಜೂರಾಗಿರುವ ವೈದ್ಯರು ಹಾಗೂ ತಜ್ಞ ವೈದ್ಯರು ಹಾಗೂ ಸಿಬ್ಬಂದಿ ವರ್ಗದ ಸಂಖ್ಯೆ ಎಷ್ಟು ?

ಇ) ಈಗ ಆ ಆಸ್ಪತ್ರೆಯಲ್ಲಿ ಯಾವ ಯಾವ ವಿಭಾಗದ ತಜ್ಞ ವೈದ್ಯರ ಹಾಗೂ ಸಿಬ್ಬಂದಿ ವರ್ಗದ ಹುದ್ದೆಗಳು ಖಾಲಿ ಇದೆ.

ಈ) ಎಷ್ಟು ದಿನಗಳಿಂದ ಮೇಲ್ಕಂಡ ಹುದ್ದೆಗಳು ಖಾಲಿ ಇವೆ ಮತ್ತು ಆ ಹುದ್ದೆಗಳನ್ನು ತುಂಬಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

ಉ) ತುರ್ತು ಸಂದರ್ಭಗಳಲ್ಲಿ ಆಪರೇಶನ್ ಮಾಡಬೇಕಾದಾಗ ಅರಿವಳಿಕೆ ತಜ್ಞರು ಸಹ ಆ ಆಸ್ಪತ್ರೆಯಲ್ಲಿ ಇಲ್ಲದಿರುವುದು ನಿಜವೆ.

ಊ) ಅಂತಹ ಸಂದರ್ಭಗಳಲ್ಲಿ ಯಾವ ಬದಲಿ ಕ್ರಮಗಳನ್ನು ಅನುಸರಿಲಾಗುತ್ತಿದೆ.

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಜಿಲ್ಲಾ ಆಸ್ಪತ್ರೆ, ಬೀದರ್ ಇಲ್ಲಿ ಕೆಲಸ ಮಾಡುತ್ತಿರುವ ವೈದ್ಯರುಗಳ ಸಂಖ್ಯೆ 20. ಇತರೆ ಸಿಬ್ಬಂದಿ ವರ್ಗದವರ ಸಂಖ್ಯೆ : 164

ಆ) ಈ ಆಸ್ಪತ್ರೆಗೆ ಮಂಜೂರಾಗಿರುವ ವೈದ್ಯರು ಹಾಗೂ ತಜ್ಞ ವೈದ್ಯರ ಸಂಖ್ಯೆ 20 ಮತ್ತು ಸಿಬ್ಬಂದಿ ವರ್ಗದವರ ಸಂಖ್ಯೆ 179

ಇ) ಈ ಆಸ್ಪತ್ರೆಯಲ್ಲಿ ಚರ್ಮರೋಗ ತಜ್ಞರು ಮತ್ತು ರೋಗ ಲಕ್ಷಣಶಾಸ್ತ್ರ ತಜ್ಞರು ಇರುವುದಿಲ್ಲ. ಆದರೆ ಈ ಹುದ್ದೆಗಳಲ್ಲಿ ಬೇರೆ ಬೇರೆ ತಜ್ಞರು ಕಾರ್ಯ ನಿರ್ವಹಿಸುತ್ತಿರುವುದರಿಂದ ವೈದ್ಯರ ಹುದ್ದೆಗಳಾವು ಖಾಲಿ ಇರುವುದಿಲ್ಲ. ಇತರ ಸಿಬ್ಬಂದಿ ವರ್ಗದ ಖಾಲಿ ಹುದ್ದೆಗಳ ಪಟ್ಟಿ ಲಗತ್ತಿಸಿದೆ ಇತರ ಖಾಲಿ ಹುದ್ದೆ 15.

ಈ) ಹುದ್ದೆಗಳು ಸುಮಾರು 1 ವರ್ಷಕ್ಕಿಂತ ಹೆಚ್ಚು ಸಮಯದಿಂದ ಖಾಲಿ ಇರುತ್ತವೆ. ಇವುಗಳನ್ನು ಸಾರ್ವತ್ರಿಕ ವರ್ಗಾವಣೆ ಸಮಯದಲ್ಲಿ ತುಂಬಲು ಕ್ರಮ ಕೈಗೊಳ್ಳಲಾಗುವುದು.